ದಿನಾಂಕ 11-10-2023 ರಂದು ಪಿ.ಡಬ್ಲ್ಯು-1 ರವರನ್ನು ಮರಳಿ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀಸವಾಲುಃ ಎದುರುದಾರರ ಪರ ಶ್ರೀ ಎಸ್.ಆರ್ ವಕೀಲರಿಂದ ಶ್ರೀ ಜಿ.ಪಿ.ಎಸ್ ವಕೀಲರ ಪರವಾಗಿ**

1) ನಾನು ಈಗ ದಿನಗೂಲಿ ಆಧಾರದ ಮೇಲೆ ಬಣ್ಣ ಹಚ್ಚುವ ಕೆಲಸ ಮಾಡುತ್ತಿದ್ದೇನೆ. ಈ ನನಗೆ ರೂಪಾಯಿ 800 ದಿನ ಕೂಲಿ ಇರುತ್ತದೆ. ನಾನು ಈ ಮೊದಲು ತೆಂಗಿನಕಾಯಿ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆನು. ನಾನು ಶರತ್ ಚಂದ್ರ ಶೆಟ್ಟಿ ಈತನಿಗೆ ಸೇರಿದ ತೆಂಗಿನಕಾಯಿ ಪ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆನು. ಸದರಿ ತೆಂಗಿನಕಾಯಿ ಪ್ಯಾಕ್ಟರಿ ಕುಂದಾಪುರ ತಾಲೂಕಿನ ಕಟ್ಟಬೆಳ್ತೂರು ಗ್ರಾಮದಲ್ಲಿ ಇರುತ್ತದೆ. ಸದರಿ ಪ್ಯಾಕ್ಟರಿಯಿಂದ ನನ್ನ ಮನೆ ಸುಮಾರು ಅರ್ಧ ಗಂಟೆ ಅಂತರದಲ್ಲಿರುತ್ತದೆ. ನನ್ನ ಸ್ವಂತ ಊರು ಹಕ್ಲಾಡಿ ಗ್ರಾಮದ ಹೊಳೆಮೊಗೆ ಇರುತ್ತದೆ.

2) ನಾನು 2007 ರಲ್ಲಿ ತೆಂಗಿನಕಾಯಿ ಪ್ಯಾಕ್ಟರಿಗೆ ಕೆಲಸಕ್ಕೆ ಸೇರಿಕೊಂಡೆನು. ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಅದೇ ಪ್ಯಾಕ್ಟರಿಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತಿದ್ದ ನಮ್ಮ ಊರಿನವಳು ನನಗೆ ಕೆಲಸ ಖಾಲಿ ಇದೆ ಎಂದು ಹೇಳಿರುತ್ತಾಳೆ. ನನಗೆ ಮಾದಲು ಪ್ಯಾಕ್ಟರಿಯಲ್ಲಿ ಕಾಯಿ ಪೌಡರನ್ನು ಮಿಷಿನ್ ಗೆ ಹಾಕುವ ಕೆಲಸಕ್ಕೆಂದು ದಿನಕೂಲಿ ಮೇಲೆ ತೆಗೆದುಕೊಂಡಿರುತ್ತಾರೆ. ಸದರಿ ಪ್ಯಾಕ್ಟರಿಯಲ್ಲಿ ತೆಂಗಿನಕಾಯಿಯ ಪುಡಿಯನ್ನು ತಯಾರು ಮಾಡುತಿತ್ತು. ನನಗೆ ಕೆಲಸಕ್ಕೆ ತೆಗೆದುಕೊಂಡ ಬಗ್ಗೆ ಯಾವುದೇ ನೇಮಕಾತಿ ಆದೇಶ ಕೊಟ್ಟಿರುವುದಿಲ್ಲ. ಆದರೆ ಪ್ಯಾಕ್ಟರಿಯವರು ಕೊಟ್ಟ ಒಂದು ನಮೂನೆಯಲ್ಲಿ ನನ್ನ ಹೆಸರು, ವಯಸ್ಸು , ಊರಿನ ಹೆಸರು ಇತ್ಯಾದಿ ಬರೆದುಕೊಟ್ಟಿರುತ್ತೇನೆ. ಸದರಿ ನಮೂನೆಯನ್ನು ನನ್ನ ವಿಷಯವಾಗಿ ಮಾಹಿತಿ ಬೇಕು ಎಂದು ಪ್ಯಾಕ್ಟರಿಯವರು ತೆಗೆದುಕೊಂಡಿರುತ್ತಾರೆ.

3) 2007 ರಲ್ಲಿ ನಾನು ಕೆಲಸಕ್ಕೆ ಸೇರಿದಾಗ ನನಗೆ ಪ್ರತಿದಿನ ರೂಪಾಯಿ 100 ರಂತೆ ದಿನಕೂಲಿ ಕೊಡುತ್ತಿದ್ದರು. ನನಗೆ ಪ್ರತಿದಿನ ರೂಪಾಯಿ 100 ದಿನಗೂಲಿ ಕೊಡುವ ಬಗ್ಗೆ ಪ್ಯಾಕ್ಟರಿಯಿಂದ ಯಾವುದೇ ದಾಖಲೆ ಕೊಟ್ಟಿರುವುದಿಲ್ಲ. ನನಗೆ ದಿನಕೂಲಿಯನ್ನು ಪ್ರತಿವಾರಕ್ಕೊಮ್ಮೆ ಕೊಡುತ್ತಿದ್ದರು. ಪ್ಯಾಕ್ಟರಿಯಲ್ಲಿ ಕೆಲಸ ಇದ್ದಾಗ ಮಾತ್ರ ನನಗೆ ಕರೆಯುತ್ತಿದ್ದು, ಕೆಲಸ ಮಾಡಿದಾಗ ದಿನಕೂಲಿ ಕೊಡುತ್ತಿದ್ದರು. ಸಾಕ್ಷಿ ಸ್ವತಃ ಹೇಳುವುದೇನೆಂದರೆ ಪ್ಯಾಕ್ಟರಿಯಲ್ಲಿ ಪ್ರತಿದಿನ ಕೆಲಸ ಇರುತಿತ್ತು. ಪ್ಯಾಕ್ಟರಿಯಲ್ಲಿ ಕೆಲಸ ಇರದಿದ್ದಾಗ ಸಹ ನನಗೆ ಸ್ವಚ್ಚತೆಗೆ ಮತ್ತು ರಿಪೇರಿ ಕೆಲಸಕ್ಕೆ ಕರೆಯುತ್ತಿದ್ದರು. ನಾನು ಯಾವ ದಿನದಿಂ ಪಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು

ತೋರಿಸುವ ದಾಖಲೆ ಇರುವುದಿಲ್ಲ , ಆದರೆ ನನಗೆ ಪಿ.ಎಫ್ ಮತ್ತು ಇ.ಎಸ್ ಐ ಸೌಲಭ್ಯ ಕೊಟ್ಟಿರುತ್ತಾರೆ.

4) ಫ್ಯಾಕ್ಟರಿಯಲ್ಲಿ ಪ್ರತಿದಿನ ಒತ್ತಡಕ್ಕೆ ಅನುಗುಣವಾಗಿ 45 ರಿಂದ 75 ಜನರವರೆಗೆ ಕೆಲಸ ಮಾಡುತ್ತಿದ್ದರು. ಫ್ಯಾಕ್ಟರಿಯಲ್ಲಿ ಕೆಲಸ ಇಲ್ಲದೇ ಇದ್ದಾಗ ಹೆಚ್ಚು ಜನರಿಗೆ ಕೆಲಸಕ್ಕೆ ಬರಲು ಹೇಳುತ್ತಿರಲಿಲ್ಲ. ನನ್ನ ಅರ್ಜಿ ಮತ್ತು ಮುಖ್ಯವಿಚಾರಣೆಯ ಪ್ರಮಾಣ ಪತ್ರ ಬರೆಯಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಫ್ಯಾಕ್ಟರಿಯವರು ನನ್ನ ದಿನಕೂಲಿಯನ್ನು ಬಾಕಿ ಉಳಿಸಿಕೊಂಡಿರುವುದಿಲ್ಲ.

5) ನನಗೆ ಮಾಸಿಕ ರೂಪಾಯಿ 13,500/- ಸಂಬಳ ಇತ್ತು ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. ನನ್ನ ಸಂಬಳ ರೂಪಾಯಿ 13,500-00 ನ್ನು ಫ್ಯಾಕ್ಟರಿಯವರು ನಗದಾಗಿ ಪಾವತಿಸುತ್ತಿದ್ದರು. ಈಗ ತೆಂಗಿನಕಾಯಿ ಫ್ಯಾಕ್ಟರಿ ಬಂದ್ ಆಗಿರುತ್ತದೆ. ಸದರಿ ಫ್ಯಾಕ್ಟರಿ ಯಾವ ಕಾರಣಕ್ಕೆ ಬಂದ್ ಆಯಿತು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ಫ್ಯಾಕ್ಟರಿ 2019 ರಲ್ಲಿ ಬಂದ್ ಆಗಿರುತ್ತದೆ. ನಿಖರವಾಗಿ ತಿಂಗಳು ಮತ್ತು ದಿನಾಂಕ ಹೇಳಲು ಬರುವುದಿಲ್ಲ. ನಾನು ಕೆಲಸ ಮಾಡುತ್ತಿದ್ದಾಗ ಫ್ಯಾಕ್ಟರಿ ಲಾಭದಲ್ಲಿ ನಡೆಯುತ್ತಿತ್ತು. ಸದರಿ ತೆಂಗಿನಕಾಯಿ ಫ್ಯಾಕ್ಟರಿಯು ನಷ್ಟವಾಗಿದ್ದರಿಂದ ಬಂದ್ ಆಗಿರುತ್ತದೆ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ. ನಾನು ಸದರಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡದೇ ಇದ್ದ ಕಾರಣ ಅದು ಯಾವ ಕಾರಣಕ್ಕೆ ಬಂದ್ ಆಯಿತು ಎಂದು ನನಗೆ ಗೊತ್ತಾಗಿರುವುದಿಲ್ಲ ಎನ್ನುವುದು ಸರಿಯಲ್ಲ.

6) ಸದರಿ ಫ್ಯಾಕ್ಟರಿ ಮುಚ್ಚಿದಾಗ ನಾನು ಏಕೆ ಮುಚ್ಚುತ್ತಿದ್ದೀರಿ ಎಂದು ಕೇಳಿದಾಗ ಮತ್ತೆ ಕೆಲಸ ಆರಂಭಿಸುತ್ತೇವೆ ಎಂದು ಹೇಳಿರುತ್ತಾರೆ. ದಿನಾಂಕ 14-12-2007 ರಿಂದ 08-07-2019 ರವರೆಗೆ ಫ್ಯಾಕ್ಟರಿಯಲ್ಲಿ ಕೆಲಸ ಮಾಡದ ಕಾರಣ ಅದು ಯಾವ ಕಾರಣಕ್ಕೆ ಮುಚ್ಚಿತು ಎಂದು ನನಗೆ ಗೊತ್ತಾಗಿಲ್ಲ ಎನ್ನುವುದು ಸರಿಯಲ್ಲ. ಸದರಿ ಫ್ಯಾಕ್ಟರಿಯನ್ನು ಮೊದಲು ಶರತ್ ಚಂದ್ರ ಶೆಟ್ಟಿ ನಡೆಸುತ್ತಿದ್ದು ಆತನ ಮರಣಾನಂತರ ಮೃತನ ಹೆಂಡತಿ ನಡೆಸುತ್ತಿದ್ದಳು.

7) ಕಾರ್ಮಿಕ ಅಧಿಕಾರಿಗಳ ಮುಂದೆ ನಾನು ಪರಿಹಾರ ಕೇಳಿ ಅರ್ಜಿ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಕಾರ್ಮಿಕ ಅಧಿಕಾರಗಳ ಮುಂದೆ ನನ್ನ ಪರವಾಗಿ ಕುಂದಾಪುರದ ಕಾರ್ಮಿಕ ಸಂಘದವರು ಅರ್ಜಿ ಕೊಟ್ಟಿದ್ದರು ಎನ್ನುವುದು ಸರಿಯಲ್ಲ. ಫ್ಯಾಕ್ಟರಿಯವರು ನನ್ನನ್ನು ಕೆಲಸದಿಂದ ತೆಗೆದ ಬಗ್ಗೆ ಪರಿಹಾರ ಕೊಡಬೇಕು ಎಂದು ಕಾರ್ಮಿಕ ಸಂಘದವರು ಅರ್ಜಿ ಸಲ್ಲಿಸಿದ್ದಾರೆ ಎನ್ನುವುದು ಸರಿಯಲ್ಲ. ನಾನು ಕಾರ್ಮಿಕ ಅಧಿಕಾರಗಳ ಮುಂದೆ ಯಾವ ದಿನಾಂಕದಂದು ಅರ್ಜಿ ಕೊಟ್ಟಿದ್ದೇನೆ ಎಂದು ನೆನಪಿರುವುದಿಲ್ಲ. ನಾನು 2019 ರಲ್ಲಿ ಅರ್ಜಿ ಕೊಟ್ಟಿರುತ್ತೇನೆ. ನನಗೆ

ಫ್ಯಾಕ್ಟರಿಯವರು ಗ್ರ್ಯಾಚ್ಯುವಿಟಿ ಕೊಡಬೇಕೆಂದು ಅರ್ಜಿ ಕೊಟ್ಟಿರುತ್ತೇನೆ. ಸದರಿ ಅರ್ಜಿಯಲ್ಲಿ ನನ್ನನ್ನು ಯಾವ ಕಾರಣಕ್ಕೆ ಕೆಲಸದಿಂದ ತೆಗೆದರು ಎಂದು ಬರೆದಿರುವುದಿಲ್ಲ , ಏಕೆಂದರೆ ನನ್ನನ್ನು ಕೆಲಸದಿಂದ ತೆಗೆದಿರುವುದಿಲ್ಲ. ಫ್ಯಾಕ್ಟರಿ ಮುಚ್ಚಿದ್ದರಿಂದ 2 ನೇ ಪಕ್ಷಗಾರ ನನಗೆ ಪರಿಹಾರ ಕೊಡಬೇಕು ಎಂದು ನನ್ನ ಬೇಡಿಕೆ ಇರುತ್ತದೆ. ಫ್ಯಾಕ್ಟರಿ ಮುಚ್ಚಿದ್ದರಿಂದ ನನಗೆ ಉದ್ಯೋಗ ಹೋಗಿದ್ದು ಪರಿಹಾರ ಬೇಕು ಎಂದು ಅರ್ಜಿ ಕೊಟ್ಟಿದ್ದೇನೆ.

8) ಫ್ಯಾಕ್ಟರಿಯವರು ನನಗೆ ಭವಿಷ್ಯ ನಿಧಿ ಖಾತೆ ತೆಗೆದುಕೊಟ್ಟಿರುತ್ತಾರೆ. ಸದರಿ ಭವಿಷ್ಯ ನಿಧಿ ಖಾತೆ ಎಲ್ಲಿಯವರೆಗೆ ಚಾಲ್ತಿಯಲ್ಲಿ ಇತ್ತು ಎಂದು ನೆನಪಿರುವುದಿಲ್ಲ , ಆದರೆ ಹಣದ ಅವಶ್ಯಕತೆ ಇದ್ದಾಗ ಅದರಲ್ಲಿನ ಹಣ ತೆಗೆದುಕೊಂಡಿದ್ದೇನೆ. ದಿನಾಂಕ 08-07-2019 ರವರೇಗೆ ನಾನು 2 ನೇ ಪಕ್ಷಗಾರನ ಕಾರ್ಖಾನೆಯಲ್ಲಿ ಕೆಲಸ ಮಾಡಿಲ್ಲ ಎನ್ನುವುದು ಸರಿಯಲ್ಲ. ನಾನು 2014 ರಲ್ಲಿಯೇ ನನ್ನ ಕೆಲಸಕ್ಕೆ ರಾಜೀನಾಮೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. ಈಗ ತೋರಿಸಿದ ದಾಖಲೆಯ ಮೇಲೆ ಇರುವ ಸಹಿ ನನ್ನದೇ ಇರುತ್ತದೆ. ಸದರಿ ದಾಖಲೆಯನ್ನು ನಿಶಾನೆ ಆರ್ -1 ಎಂದು , ಸಾಕ್ಷಿ ಸಹಿಯನ್ನು ನಿಶಾನೆ ಆರ್ -1(ಎ) ಎಂದು ಗುರುತಿಸಿತು. ನಿಶಾನೆ ಆರ್-1 ನಾನು 2 ನೇ ಪಕ್ಷಗಾರನಿಗೆ ಕೊಟ್ಟ ರಾಜೀನಾಮೆ ಪತ್ರ ಇರುತ್ತದೆ ಎನ್ನುವುದು ಸರಿ ಇದೆ. ಸದರಿ ರಾಜೀನಾಮೆ ಕೊಟ್ಟು ನಾನು ನನ್ನ ಭವಿಷ್ಯ ನಿಧಿ ಹಣವನ್ನು ತೆಗೆದುಕೊಂಡಿದ್ದೇನೆ. ನಾನು ಹಾಜರುಪಡಿಸಿರುವ ನಿಶಾನೆ ಪಿ-4 ಭವಿಷ್ಯ ನಿಧಿಯ ದಾಖಲೆಗಳು 2008 ನೇ ಸಾಲಿನದ್ದು ಇರುತ್ತದೆ. 2008 ನೇ ಸಾಲಿನ ನಂತರದ ಭವಿಷ್ಯ ನಿಧಿಯ ದಾಖಲೆಗಳು ನನ್ನ ಬಳಿ ಇರುತ್ತವೆ. ಎಷ್ಟು ವರ್ಷದ ಭವಿಷ್ಯ ನಿಧಿ ದಾಖಲೆಗಳು ನನ್ನ ಬಳಿ ಇರುತ್ತವೆ ಎಂದು ನನಗೆ ಹೇಳಲು ಬರುವುದಿಲ್ಲ.

9) ಭವಿಷ್ಯ ನಿಧಿಯ ನನ್ನ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ಇ ಎಸ್ ಐ ಸೌಲಭ್ಯ ನೀಡಿದ ಬಗ್ಗೆ ನಾನು ದಾಖಲೆ ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ಸದರಿ ದಾಖಲೆ ಯಾವ ವರ್ಷಕ್ಕೆ ಸಂಬಂಧಪಟ್ಟಿದ್ದು ಎಂದು ಹೇಳಲು ಬರುವುದಿಲ್ಲ. ನನ್ನ ಇ ಎಸ್ ಐ ಸೌಲಭವನ್ನು ಯಾವ ವರ್ಷದಲ್ಲಿ ನೊಂದಾಯಿಸಿದೆ ಎಂದು ಹೇಳಲು ಬರುವುದಿಲ್ಲ. ನಾನು ದಿನಾಂಕ 29-11-2016 ರಂದು ಇ ಎಸ್ ಐ ಸೌಲಭ್ಯಕ್ಕೆ ನೊಂದಾಯಿಸಿರಬಹುದಾಗಿದೆ. ಸದರಿ ಇ .ಎಸ್ ಐ ವಿಮೆಯು ದಿನಾಂಕ 28-12-2016 ರವರೆಗೆ ಮಾತ್ರ ರಕ್ಷಣೆ ಕೊಡುತ್ತದೆ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ. ಸದರಿ ಇ ಎಸ್ ಐ ವಿಮೆಯಲ್ಲಿ ನಾನು ಕೆಲಸಕ್ಕೆ ಸೇರಿದ ದಿನಾಂಕ 01-05-2016 ರಂದು ಉಲ್ಲೇಖ ಆಗಿರುತ್ತದೆ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ. ಇ ಎಸ್ ಐ ದಾಖಲೆ ಪ್ರಕಾರ ನಾನು ಕೇವಲ 6 ತಿಂಗಳು ಮಾತ್ರ ನಾನು ಕಾರ್ಖಾನೆಯಲ್ಲಿ ಕೆಲಸ ಮಾಡಿದ್ದೇನೆ ಎನ್ನುವುದು ಸರಿಯಲ್ಲ.

10) ನಾನು ಇ ಎಸ್ ಐ ನೊಂದಣಿ ಪುಸ್ತಕವನ್ನು ನಿಶಾನೆ ಪಿ -3 ನ್ನು ಹಾಜರುಪಡಿಸಿದ್ದೇನೆ. ಸದರಿ ನಿಪಿ-3 ಇ ಎಸ್ ಐ ಗೆ ಸಂಬಂಧಪಟ್ಟ ದಾಖಲೆ ಎಂದು ಉಲ್ಲೇಖ ಇರುವುದಿಲ್ಲ ಎನ್ನುವ ಬಗ್ಗೆ ಗೊತ್ತಿರುವುದಿಲ್ಲ. ನಿಪಿ-3 ಅನ್ನು ನನ್ನ ಕುಟುಂಬದ ಮಾಹಿತಿ ಕೊಡಲು 2 ನೆ ಪಕ್ಷಗಾರರಿಗೆ ಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ. 2014 ರಲ್ಲಿ ನಾನು ಕಾರ್ಖಾನೆಯ ಕೆಲಸಕ್ಕೆ ರಾಜೀನಾಮೆ ಕೊಟ್ಟು ಭವಿಷ್ಯ ನಿಧಿ ಮತ್ತು ಇತರೇ ಸೌಲಭ್ಯಗಳನ್ನು ಪಡೆದುಕೊಂಡಿದ್ದು ಅಲ್ಲಿಂದ ನನಗೆ ಮತ್ತು 2 ನೇ ಪಕ್ಷಗಾರರಿಗೆ ಯಾವುದೇ ಸಂಬಂಧ ಉಳಿದಿಲ್ಲ ಎನ್ನುವುದು ಸರಿಯಲ್ಲ. 2 ನೇ ಪಕ್ಷಗಾರರು ಮಾನವೀಯತೆಯ ನೆಲೆಯಲ್ಲಿ ನನಗೆ ಇ ಎಸ್ ಐ ಸೌಲಭ್ಯ ಕೊಟ್ಟಿದ್ದಾರೆ ಎನ್ನುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

11) ನಾನು ಕಾರ್ಖಾನೆಯವರಿಗೆ ನನಗೆ ಕೆಲಸ ಸಿಗುವವರೆಗೆ ಕೆಲಸ ಕೊಡಿ ಎಂದು ಕೇಳಿದ್ದೆನು. ಸದರಿ ವಿಷಯವಾಗಿ ನಾನು ಲಿಖಿತವಾಗಿ ಕಾರ್ಖಾನೆಗೆ ಕೇಳಿರುವುದಿಲ್ಲ. 2 ನೇ ಪಕ್ಷಗಾರರು ನನಗೆ ಕೆಲಸ ಕೊಡದೇ ಇದ್ದಲ್ಲಿ 3 ತಿಂಗಳ ಸಂಬಳ ಕೊಡಬೇಕು ಎಂದು ಕೇಳಿದ ಬಗ್ಗೆ ನನ್ನ ಅರ್ಜಿಯಲ್ಲಿ ಉಲ್ಲೇಖ ಮಾಡಿರುತ್ತೇನೆ. ಕಾರ್ಖಾನೆ ಮುಚ್ಚಿದ ನಂತರ 3 ತಿಂಗಳು ಕೆಲಸ ಇರದೇ ಇದ್ದ ಕಾರಣ ನಾನು 3 ತಿಂಗಳ ಸಂಬಳವನ್ನು ಕೇಳಿರುತ್ತೇನೆ. ಕಾರ್ಖಾನೆ ಮುಚ್ಚುವಾಗ ನಾನು ಅದರ ಕಾರ್ಮಿಕನು ಇರದೇ ಇದ್ದರು ಸಹ ನನ್ನ ಮುಖ್ಯವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಕಾರ್ಖಾನೆ ಮುಚ್ಚುವಾಗ ನಾನು ಅದರ ಕಾರ್ಮಿಕನಿರದ ಕಾರಣ ನನಗೆ ನೋಟಿಸು ನೀಡುವ ಪ್ರಶ್ನೆ ಇಲ್ಲ ಎನ್ನುವುದು ಸರಿಯಲ್ಲ. ನಾನು 2007 ರಿಂದ 2019 ರವರೆಗೆ ಕಾರ್ಖಾನೆಯಲ್ಲಿ ಕೆಲಸ ಮಾಡದೇ ಇದ್ದ ಕಾರಣ ನನ್ನ ಅರ್ಜಿ ಉರ್ಜಿತ ಅಲ್ಲ ಎನ್ನುವುದು ಸರಿಯಲ್ಲ. ನನಗೆ ಪ್ರತಿ ತಿಂಗಳು ರೂಪಾಯಿ 13500-00 ಸಂಬಳ ಇತ್ತು ಎಂದು ಮುಖ್ಯವಿಚಾರಣೆಯಲ್ಲಿ ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ.

12) ನಾನು 2 ನೇ ಪಕ್ಷಗಾರರ ಕಾರ್ಮಿಕನಿರದ ಕಾರಣ ಯಾವುದೇ ಪರಿಹಾರ ಪಡೆಯುವ ಅರ್ಹತೆ ಇಲ್ಲ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆ ಮುಚ್ಚುವಾಗ ಕೆಲಸ ಮಾಡದೇ ಇದ್ದ ಕಾರಣ 3 ತಿಂಗಳ ಸಂಬಳ ಕೇಳುವ ಅರ್ಹತೆ ಇಲ್ಲ ಎನ್ನುವುದು ಸರಿಯಲ್ಲ. ನಾನು ರಾಜೀನಾಮೆ ನೀಡಿದಾಗಲೇ ಎಲ್ಲಾ ಸೌಲಭ್ಯ ಪಡೆದುಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಾನು ಕಾರ್ಮಿಕ ಇಲಾಖೆಯಲ್ಲಿ ಅರ್ಜಿ ಕೊಟ್ಟಾಗ ಸುಳ್ಳು ವಿಷಯ ಹೇಳಿದ್ದೇನೆ ಎನ್ನುವುದು ಸರಿಯಲ್ಲ.

13) ನಾನು ಬೇರೆಯವರ ಪ್ರಚೋದನೆ ಮೇರೆಗೆ ಸುಳ್ಳು ಅರ್ಜಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಕಾರ್ಖಾನೆಯ ಕಾರ್ಮಿಕನಿರದಿದ್ದರೂ ಸಹ ಅಕ್ರಮವಾಗಿ ಹಣ ವಸೂಲಿ ಮಾಡಲೆಂದು ಸುಳ್ಳು ಅರ್ಜಿ ಹೂಡಿದ್ದೇನೆ ಎನ್ನುವುದು ಸರಿಯಲ್ಲ.

-ಮರುವಿಚಾರಣೆ - ಇಲ್ಲ -

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಶಾಂತವೀರ ಶಿವಪ್ಪ)
ಪ್ರಧಾನ ಜಿಲ್ಲಾ/ಕಾರ್ಮಿಕ ನ್ಯಾಯಾಧೀಶರು
ಜಿಲ್ಲಾ ನ್ಯಾಯಾಲಯ, ಉಡುಪಿ